**B**

**CCE RR/PR/ NSR/NSPR**

**ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ, ಮಲ್ಲೇಶ್ವರಂ, ಬೆಂಗಳೂರು – 560 003**

**KARNATAKA SCHOOL EXAMINATION AND ASSESSMENT BOARD, MALLESHWARAM, BENGALURU – 560 003**

**ಜೂನ್ 2024 ರ ಪರೀಕ್ಷೆ - 2**

**JUNE 2024 EXAMINATION - 2**

**ಮಾದರಿ ಉತ್ತರಗಳು**

**MODEL ANSWERS**

**ಸಂಕೇತ ಸಂಖ್ಯೆ : 62-K** **CODE NO. : 62-K**

# ವಿಷಯ : ತೃತೀಯ ಭಾಷೆ — ಕನ್ನಡ

# Subject : Third Language — KANNADA

**(ಶಾಲಾ ಪುನರಾವರ್ತಿತ ಅಭ್ಯರ್ಥಿ / ಖಾಸಗಿ ಪುನರಾವರ್ತಿತ ಅಭ್ಯರ್ಥಿ / ಎನ್.ಎಸ್.ಆರ್. / ಎನ್.ಎಸ್.ಪಿ.ಆರ್.)**

**(Regular Repeater / Private Repeater / NSR / NSPR)**

**ದಿನಾಂಕ : 15. 06. 2024 ]** **[ ಗರಿಷ್ಠ ಅಂಕಗಳು : 80**

**Date : 15. 06. 2024 ]** **[ Max. Marks : 80**

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| **I.** | ಬಹು-ಆಯ್ಕೆ ಪ್ರಶ್ನೆ (ಕ್ರಮಾಕ್ಷರದೊಂದಿಗಿನ ಪ್ರತಿ ಸರಿಯುತ್ತರಕ್ಕೆ 1 ಅಂಕ) : | **8 × 1 = 8** |
| 1. | ಕನ್ನಡ ವರ್ಣಮಾಲೆಯಲ್ಲಿರುವ ಸ್ವರಗಳ ಸಂಖ್ಯೆ<br>(ಎ) ೪೯ (ಬಿ) ೨೫<br>(ಸಿ) ೧೩ (ಡಿ) ೦೯<br>***ಉತ್ತರ :*** (ಸಿ) ೧೩ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| 2. | 'ಮನೆ' – ಪದದ ಬಹುವಚನ ರೂಪ<br>(ಎ) ಮನೆಗಳು (ಬಿ) ಮರ<br>(ಸಿ) ಮರಗಳು (ಡಿ) ಮಠ<br>***ಉತ್ತರ :*** (ಎ) ಮನೆಗಳು | |
| 3. | ಕೆಳಗಿನವುಗಳಲ್ಲಿ ಲೋಪ ಸಂಧಿಗೆ ಉದಾಹರಣೆಯಾಗಿರುವ ಪದ<br>(ಎ) ದೇವಾಲಯ (ಬಿ) ನಾವೆಲ್ಲರೂ<br>(ಸಿ) ನವೋದಯ (ಡಿ) ಸದಭಿರುಚಿ<br>***ಉತ್ತರ :*** (ಬಿ) ನಾವೆಲ್ಲರೂ | |
| 4. | ಕೆಳಗಿನವುಗಳಲ್ಲಿ ದ್ವಿರುಕ್ತಿಗೆ ಉದಾಹರಣೆಯಾಗಿರುವ ಪದ<br>(ಎ) ಧಗಧಗ (ಬಿ) ಬೇಗಬೇಗ<br>(ಸಿ) ಕೈಕೊಡು (ಡಿ) ಮನೆಮಠ<br>***ಉತ್ತರ :*** (ಬಿ) ಬೇಗಬೇಗ | |
| 5. | ಶಿಕ್ಷಕರು ಶಾಲೆಯ ಪ್ರತಿ ವಿದ್ಯಾರ್ಥಿಗೆ ಒಂದೊಂದು ಪುಸ್ತಕವನ್ನು ಕೊಟ್ಟರು. – ಈ ವಾಕ್ಯದಲ್ಲಿ 'ಪುಸ್ತಕವನ್ನು' ಪದವು ಈ ವಿಭಕ್ತಿಗೆ ಉದಾಹರಣೆಯಾಗಿದೆ<br>(ಎ) ಪ್ರಥಮಾ ವಿಭಕ್ತಿ (ಬಿ) ದ್ವಿತೀಯಾ ವಿಭಕ್ತಿ<br>(ಸಿ) ಪಂಚಮೀ ವಿಭಕ್ತಿ (ಡಿ) ಸಪ್ತಮೀ ವಿಭಕಿ<br>***ಉತ್ತರ :*** (ಬಿ) ದ್ವಿತೀಯಾ ವಿಭಕ್ತಿ | |
| 6. | ಕೆಳಗಿನವುಗಳಲ್ಲಿ ಇಂಗ್ಲಿಷಿನಿಂದ ಬಂದು ಕನ್ನಡದಲ್ಲಿ ಬಳಕೆಯಾಗುತ್ತಿರುವ ಪದ<br>(ಎ) ಕಾಗದ (ಬಿ) ಸಾಬೂನು<br>(ಸಿ) ಟಿಕೆಟ್ (ಡಿ) ಆಕಾಶ<br>***ಉತ್ತರ :*** (ಸಿ) ಟಿಕೆಟ್ | |
| 7. | ವಿದ್ಯಾರ್ಥಿಗಳು ಶಾಲೆಯಲ್ಲಿ ಹಾಲನ್ನು ಕುಡಿಯುತ್ತಾರೆ. ಈ ವಾಕ್ಯವು<br>(ಎ) ಸಾಮಾನ್ಯ ವಾಕ್ಯ (ಬಿ) ಮಿಶ್ರವಾಕ್ಯ<br>(ಸಿ) ಸಂಯೋಜಿತ ವಾಕ್ಯ (ಡಿ) ಅಲಂಕಾರಿಕ ವಾಕ್ಯ<br>***ಉತ್ತರ :*** (ಎ) ಸಾಮಾನ್ಯ ವಾಕ್ಯ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| 8. | ಒಬ್ಬರು ಹೇಳಿದ ಹೇಳಿಕೆಯನ್ನು ಯಥಾವತ್ತಾಗಿ ಬರೆಯುವಾಗ ಬಳಸುವ ಲೇಖನ ಚಿಹ್ನೆ<br>(ಎ) ಭಾವಸೂಚಕ (ಬಿ) ಪೂರ್ಣವಿರಾಮ<br>(ಸಿ) ಅರ್ಧವಿರಾಮ (ಡಿ) ಉದ್ಧರಣ<br>***ಉತ್ತರ :*** (ಡಿ) ಉದ್ಧರಣ | |
| **II.** | **ಸಂಬಂಧೀಪದ ಬರೆಯುವುದು (ಪ್ರತಿ ಸರಿಯುತ್ತರಕ್ಕೆ 1 ಅಂಕ) :** | **4 × 1 = 4** |
| 9. | ತಿರುಮಲಾಂಬ : ನಂಜನಗೂಡು :: ಆರ್. ಕಲ್ಯಾಣಮ್ಮ : ................ .<br>***ಉತ್ತರ :*** ಬೆಂಗಳೂರು | |
| 10. | ಆಚಾರವೇ : ಸ್ವರ್ಗ :: ಅನಾಚಾರವೇ : ......................... .<br>***ಉತ್ತರ :*** ನರಕ | |
| 11. | ರೂಪಾಯಿ : ಭಾರತದ ನಾಣ್ಯ :: ಡಾಲರ್ : ......................... .<br>***ಉತ್ತರ :*** ಅಮೆರಿಕಾ | |
| 12. | ಮೂಡಲಾಗಿ ಹುಯ್ಯೋದು : ಮುತ್ತಿನ ಸೋನೆಮಳೆ :: ಸಾವಿರಾರು ಕೆರೆ ತುಂಬೋದು : ......................... .<br>***ಉತ್ತರ :*** ಸಾತೆಯ ಮಳೆ | |
| **III.** | **ಒಂದೊಂದು ವಾಕ್ಯದಲ್ಲಿ ಉತ್ತರಿಸುವಿಕೆ**<br>**(ವಾಕ್ಯರೂಪದಲ್ಲಿ ಬರೆದ ಪ್ರತಿ ಸರಿ ಉತ್ತರಕ್ಕೆ ಒಂದು ಅಂಕ) :** | **4 × 1 = 4** |
| 13. | ವಿಶುವಿನ ಎದೆಯಲ್ಲಿ ಎಂದೆಂದಿಗೂ ನಿಲ್ಲದಂತೆ ಮೊಳಗುತ್ತಿದ್ದ ಪದ ಯಾವುದು ?<br>***ಉತ್ತರ :***<br>ವಿಶುವಿನ ಎದೆಯಲ್ಲಿ ಎಂದೆಂದಿಗೂ ನಿಲ್ಲದಂತೆ ಮೊಳಗುತ್ತಿದ್ದ ಪದ 'ಮಹಾಶಿಲ್ಪಿ'. | |
| 14. | ಸತೀಶ ಕುಲಕರ್ಣಿಯವರು ಎಂತಹ ಹಾಡನ್ನು ಕಟ್ಟುತ್ತೇವೆಂದು ಹೇಳಿದ್ದಾರೆ ?<br>***ಉತ್ತರ :***<br>ಸತೀಶ ಕುಲಕರ್ಣಿಯವರು ನೂರು ಮನಸಿನ ಕೋಟಿ ಕನಸಿನ ಹಾಡು ಕಟ್ಟುತ್ತೇವೆಂದು ಹೇಳಿದ್ದಾರೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| 15. | ಮಂಜುನಾಥಯ್ಯನವರ ಮನೆಯಲ್ಲಿ ಆಗಾಗ್ಗೆ ಮೊಕ್ಕಾಂ ಹೂಡುತ್ತಿದ್ದ ಸಾಹಿತಿಗಳು ಯಾರು ?<br>***ಉತ್ತರ :***<br>ಮಂಜುನಾಥಯ್ಯನವರ ಮನೆಯಲ್ಲಿ ಆಗಾಗ್ಗೆ ಮೊಕ್ಕಾಂ ಹೂಡುತ್ತಿದ್ದ ಸಾಹಿತಿಗಳೆಂದರೆ ಶಿವರಾಮ ಕಾರಂತ, ಮಾಸ್ತಿ ವೆಂಕಟೇಶ್ ಅಯ್ಯಂಗಾರ್ ಮತ್ತು ದ.ರಾ. ಬೇಂದ್ರೆ. | |
| 16. | ಧರ್ಮಪದನಿಗೆ ವಿಷ ಬೆರೆಸಿದ ಆಹಾರ ತಿನ್ನಲು ಕೊಟ್ಟವರು ಯಾರು ?<br>***ಉತ್ತರ :***<br>ಧರ್ಮಪದನಿಗೆ ವಿಷ ಬೆರೆಸಿದ ಆಹಾರ ತಿನ್ನಲು ಕೊಟ್ಟವರು ಒಬ್ಬ ಧೂರ್ತ ಶಿಲ್ಪಿ. | |
| **IV.** | **ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯುವಿಕೆ.**<br>**(ಉತ್ತರದ ಅಂಶಗಳನ್ನಾಧರಿಸಿ ಪ್ರತಿ ಸರಿ ಉತ್ತರಕ್ಕೆ ಎರಡು ಅಂಕ ನೀಡುವುದು) :** | **$8 \times 2 = 16$** |
| 17. | ಪೊಲೀಸರು ಗೊರೂರರನ್ನು ಲಾಕಪ್ಪಿನಲ್ಲಿ ಮಲಗಿಸಲು ಯೋಚಿಸಿದ್ದೇಕೆ ?<br>***ಉತ್ತರ :***<br>ಟ್ರಾಫಿಕ್ ಪೊಲೀಸಿನವ ಗೊರೂರರನ್ನು ಮನೆಗೆ ಕರೆದುಕೊಂಡು ಹೋಗಿ ಅವರಿಗೆ ಊಟ ಮಾಡಿಸಿದನು. ಊಟವಾದ ನಂತರ ಪೊಲೀಸಿನವ "ನಮ್ಮ ಮನೆಯ ಹಾಸಿಗೆ ಅನೇಕ ದಿನಗಳಿಂದ ಉಪಯೋಗಿಸದೆ ಇರುವುದರಿಂದ ಧೂಳು ತುಂಬಿದೆ. ನಮ್ಮನೆಯ ಮಗ್ಗುಲಲ್ಲಿ ನನ್ನ ವಶದಲ್ಲಿ ಒಂದು ಲಾಕಪ್ ಇದೆ. ಗಾಳಿ ಬೆಳಕು ಸ್ವಚ್ಛವಾದ ಹಾಸಿಗೆ. ವಾರಕ್ಕೆರಡು ಸಲ ಕ್ರಿಮಿನಾಶಕ ಸಾರಣೆ ಅಲ್ಲಿ ಮಲಗಿಬಿಡಿ. ನಿಮಗೆ ಸೊಗಸಾದ ನಿದ್ರೆ ಬರುತ್ತೆ" ಎಂದು ಗೊರೂರರನ್ನು ಲಾಕಪ್ಪಿನಲ್ಲಿ ಮಲಗಿಸಲು ಯೋಚಿಸಿದನು. | |
| 18. | ಮಿನಿಪೊಲೀಸ್ ನಗರದ ಪೊಲೀಸರು ಗೊರೂರರನ್ನು ಹೇಗೆ ಉಪಚರಿಸಿದರು ?<br>***ಉತ್ತರ :***<br>ಮಿನಿಪೊಲೀಸ್ ನಗರದ ಟ್ರಾಫಿಕ್ ಪೊಲೀಸನು ಗೊರೂರರನ್ನು ತನ್ನ ಕಾರಿನಲ್ಲಿ ಮನೆಗೆ ಕರೆದುಕೊಂಡು ಹೋದನು. ಅಲ್ಲಿ ಗೊರೂರರಿಗೆ ಬ್ರೆಡ್, ಹಾಲು, ಹಣ್ಣು ಮತ್ತು ಬಿಸ್ಕತ್ತುಗಳನ್ನು ರಾತ್ರಿ ಊಟಕ್ಕೆ ನೀಡಿದನು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಊಟವಾದ ನಂತರ ಗಾಳಿ ಬೆಳಕು ಬರುವ ಲಾಕಪ್ಪಿನಲ್ಲಿ ಸ್ವಚ್ಛವಾದ ಹಾಸಿಗೆ ನೀಡಿ ಮಲಗಲು ಹೇಳಿದನು. ಮುಂಜಾನೆ ಗೊರೂರರ ಗೆಳೆಯನ ಮನೆಯ ವಿಳಾಸಕ್ಕೆ ತಲುಪಿಸಿದನು. ಈ ರೀತಿಯಾಗಿ ಟ್ರಾಫಿಕ್ ಪೊಲೀಸಿನವ ಗೊರೂರರನ್ನು ಉಪಚರಿಸಿದನು. | |
| 19. | ಶರೀಫರು ತಮಗಾದ ದುಃಖವನ್ನು ಕಡಿಮೆ ಮಾಡಿಕೊಂಡ ಬಗೆಯನ್ನು ತಿಳಿಸಿರಿ.<br>***ಉತ್ತರ :***<br>ಶರೀಫರು ಮಗಳ ಮತ್ತು ಹೆಂಡತಿಯ ಮರಣಗಳಿಂದ ಧೃತಿಗೆಡಲಿಲ್ಲ. ಅವರು ತಮಗಾದ ದುಃಖವನ್ನು ಸಾಧು ಸತ್ಪುರುಷರ ಸಹವಾಸದಿಂದ ಕಡಿಮೆ ಮಾಡಿಕೊಳ್ಳತೊಡಗಿದರು. ದೇವರ ಧ್ಯಾನ ಮತ್ತು ಉಪಾಸನೆಗಳಲ್ಲಿ ತಮ್ಮ ಹೃದಯಕ್ಕಾದ ಪೆಟ್ಟನ್ನು ಮರೆತರು ಮನೆಯ ಮಗ್ಗುಲಿನ ಕಟ್ಟೆಯ ಮೇಲೆ ಕುಳಿತು ಅಧ್ಯಾತ್ಮ-ಸುಬೋಧ ಧರ್ಮ-ನೀತಿ ಮಾತುಗಳನ್ನು ಬೋಧಿಸುವ ಹವ್ಯಾಸದಿಂದ ದುಃಖವನ್ನು ಕಡಿಮೆ ಮಾಡಿಕೊಂಡರು. | |
| 20. | ಸ್ವರ್ಗ-ನರಕಗಳ ಬಗೆಗೆ ಬಸವಣ್ಣನವರು ಕೊಟ್ಟಂತಹ ಹೊಸ ಸೂತ್ರ ಯಾವುದು ?<br>***ಉತ್ತರ :***<br>ದೇವಲೋಕ ಮರ್ತ್ಯಲೋಕವೆಂಬುದು ಬೇರೆ ಎಲ್ಲಿಯೂ ಇಲ್ಲ. ನಾವು ಸತ್ಯವ ನುಡಿದರೆ ಅದುವೇ ದೇವಲೋಕವಾಗುತ್ತದೆ. ನಾವು ಸುಳ್ಳನ್ನಾಡಿದರೆ ಅದುವೇ ಮರ್ತ್ಯಲೋಕವಾಗುತ್ತದೆ. ನಾವು ನಮ್ಮ ನಡೆನುಡಿಗಳಲ್ಲಿ ಆಚಾರವಂತರಾದರೆ ಅದು ಸ್ವರ್ಗ ಮತ್ತು ಅನಾಚಾರಿಗಳಾದರೆ ಅದು ನರಕ ಎಂಬುದು ಬಸವಣ್ಣನವರು ಸ್ವರ್ಗ ನರಕಗಳ ಬಗ್ಗೆ ನೀಡಿರುವ ಹೊಸ ಸೂತ್ರವಾಗಿದೆ. | |
| 21. | 'ಕಟ್ಟುತೇವ ನಾವು' ಕವಿತೆಯು ಕ್ರಾಂತಿಕಾರಿಗಳ ಕನಸಿನ ನಾಡನ್ನು ಹೇಗೆ ಕಟ್ಟಲು ಬಯಸುತ್ತಿದೆ ?<br>***ಉತ್ತರ :***<br>ಗೋಳಿಲ್ಲದ, ಗುಂಡಿಲ್ಲದ ನಾಡನ್ನು ಕಟ್ಟುವುದರ ಮೂಲಕ, ನೂರಾರು ಮನಸ್ಸುಗಳಲ್ಲಿ ತುಂಬಿರುವ ಕೋಟಿ ಕನಸುಗಳನ್ನು ಸಾಕಾರಗೊಳಿಸಿ, | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ಸುಂದರ, ಸಮೃದ್ಧ, ಸಮಾನತೆಯ ನಾಡನ್ನು ಕಟ್ಟುತ್ತೇವೆ. ಮುಳ್ಳಿನ ದಾರಿಯನ್ನು ತುಳಿದು ಕ್ರಾಂತಿಯನ್ನು ಮಾಡಿ ಜನರಲ್ಲಿ ಆತ್ಮವಿಶ್ವಾಸವನ್ನು ಮೂಡಿಸುತ್ತೇವೆ. ಕಾಲು ರಕ್ತದಿಂದ ಕೂಡಿದ್ದರೂ ಸಹ ಕ್ರಾಂತಿಯ ಮೂಲಕ ಈ ನೆಲದಲ್ಲಿ ಹೋರಾಟ ಮಾಡುತ್ತೇವೆಂದು ಬಯಸುತ್ತೇವೆಂದು ಸತೀಶ ಕುಲಕರ್ಣಿಯವರು ಹೇಳಿದ್ದಾರೆ. | |
| 22. | ಬಸವಣ್ಣನವರು ಹೇಳಿರುವಂತೆ ಅಂತಃಶುದ್ಧಿಯನ್ನು ಕಾಪಾಡಿಕೊಳ್ಳುವುದು ಹೇಗೆ ? ನಿಮ್ಮ ಮಾತುಗಳಲ್ಲಿ ಅಭಿವ್ಯಕ್ತಪಡಿಸಿರಿ.<br>***ಉತ್ತರ :***<br>ನಾವು ಇತರರ ವಸ್ತುಗಳನ್ನು ಕದಿಯಬಾರದು ಸುಳ್ಳು ಮಾತನಾಡಬಾರದು. ಇತರರ ಮೇಲೆ ಕೋಪಿಸಿಕೊಳ್ಳಬಾರದು. ಅನ್ಯರಿಗೆ ಅಸಹ್ಯ ಪಡಬಾರದು ತನ್ನನ್ನು ತಾನು ಹೊಗಳಿಕೊಳ್ಳಬಾರದು. ಇನ್ನೊಬ್ಬರ ಮನಸ್ಸಿಗೆ ನೋವಾಗುವಂತೆ ಹಳಿಯಬಾರದು. ಇನ್ನೊಬ್ಬರನ್ನು ಹಿಂಸಿಸಿ ಕೊಲ್ಲಕೂಡದು ಈ ರೀತಿಯಾಗಿ ನಾವು ನಡೆ-ನುಡಿಗಳಲ್ಲಿ ಆಚಾರವಂತರಾಗಿ ಬದುಕಿದರೆ ಅಂತಃಶುದ್ಧಿಯನ್ನು ಕಾಪಾಡಿಕೊಳ್ಳಬಹುದು ಎಂದು ಬಸವಣ್ಣನವರು ಸಾರಿದ್ದಾರೆ. | |
| 23. | ಧರ್ಮಪದನು ತನ್ನ ಭಾವನೆಗಳನ್ನು ಏಕೆ ಹತ್ತಿಕ್ಕಿಕೊಂಡನು ?<br>***ಉತ್ತರ :***<br>ಧರ್ಮಪದನು ಕೊನಾರ್ಕ ದೇವಾಲಯದ ಮಹಾದ್ವಾರಕ್ಕೆ ಕಲಶ ಕೂಡಿಸಲು ವಿಶುವಿನ ಬಳಿ ಬಂದ. ವಿಶುವಿನ ಕಣ್ಣುಗಳು ಆಳಕ್ಕಿಳಿದಿವೆ. ನರೆಗೂದಲಿನ ಗಡ್ಡ ಮತ್ತು ವಿಶುವಿನ ತುಟಿಗಳಲ್ಲಿ ಜೀವಸೆಲೆಯಿಲ್ಲ ಎದೆಯಲ್ಲಿ ಉತ್ಕಟವಾದ ಪ್ರೇಮತುಂಬಿ ತಂದೆಯನ್ನು ಅಪ್ಪಿಕೊಳ್ಳಬೇಕೆಂಬ ಬಯಕೆ ಧರ್ಮಪದನಿಗೆ. ಬಹುಕಾಲದ ಅಗಲಿಕೆ ಜೀವವನ್ನು ಹಿಂಡಿತ್ತು. ತಂದೆಯನ್ನು ಅಪ್ಪಿಕೊಂಡು ಮಾತನಾಡಿಸಬೇಕೆಂಬ ಭಾವ ತೀವ್ರವಾದಾಗ ತನ್ನ ಭಾವನೆಗಳನ್ನು ಹತ್ತಿಕ್ಕಿದನು. | |
| 24. | ಕುಲಕರ್ಣಿಯು ರಾಮಸಿಂಗ್‌ನ ಮೇಲೆ ಗುಂಡುಹಾರಿಸಿದ್ದೇಕೆ ?<br>***ಉತ್ತರ :***<br>ರಾಮಸಿಂಗ್ ಉತ್ಸಾಹೀ ತರುಣ ಅವನು ಬ್ರಿಟಿಷ್ ಸಿಪಾಯಿಗಳಿಗೆ ಹೆದರದೆ ಸ್ವಾತಂತ್ರ್ಯ ಹೋರಾಟ ಮುಂದುವರಿಸಿದ್ದಾನೆ. ಕುಲಕರ್ಣಿಯು ಕೈಯಲ್ಲಿ ಪಿಸ್ತೂಲು ತೋರಿಸಿದಾಗ ತಾನೂ ರಾಷ್ಟ್ರಧ್ವಜ ಎತ್ತಿ ತೋರಿಸುತ್ತಾನೆ. "ಮಾಡು | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ಇಲ್ಲವೆ ಮಡಿ ಇದು ಗಾಂಧೀಜಿ ನಮಗೆ ಹೇಳಿಕೊಟ್ಟ ಮಂತ್ರ ಬ್ರಿಟಿಷರೇ, ಭಾರತ ಬಿಟ್ಟು ತೊಲಗಿರಿ'' ಎಂದು ಸಾರಲು ಬಂದಿದ್ದೇವೆ. ಸಭೆ ಸೇರಿಸಕೂಡದು ಎಂದು ಕುಲಕರ್ಣಿ ಗಾಳಿಯಲ್ಲಿ ಗುಂಡು ಹಾರಿಸಿದಾಗ ಅವನ ಆದೇಶವನ್ನು ಧಿಕ್ಕರಿಸಿ ರಾಮಸಿಂಗ್ ''ಬೋಲೋ ಭಾರತ ಮಾತಾಕೀ ಜಯ್ ವಂದೇ ಮಾತರಂ'' ಎಂದು ಜಯಕಾರ ಹಾಕಿದಾಗ ಕೋಪಗೊಂಡ ಕುಲಕರ್ಣಿ ರಾಮಸಿಂಗ್‌ನ ಮೇಲೆ ಗುಂಡು ಹಾರಿಸಿದನು. | |
| V. | **ಸಂದರ್ಭಸಹಿತ ವಿವರಣೆ :** | **2 × 3 = 6** |
| | ಪದ್ಯದ ಹೆಸರು, ಕೃತಿ, ಕರ್ತೃ | 1 ಅಂಕ |
| | ಯಾರು–ಯಾರಿಗೆ, ಸಂದರ್ಭ ವಿವರಣೆಗೆ | 1 ಅಂಕ |
| | ಭಾಷಾಶೈಲಿಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 25. | ''ದೇವಿ ನನ್ನ ಅಪರಾಧವನ್ನು ಕ್ಷಮಿಸು.''<br>***ಉತ್ತರ :***<br>ಈ ಮಾತನ್ನು ವಿಜಯಲಕ್ಷ್ಮಿ ಬಾಳೇಕುಂದ್ರಿಯವರು ಬರೆದ 'ಜೀವನಧಾರೆ' ಎಂಬ ಕೃತಿಯಿಂದ ಆಯ್ದ 'ಕರ್ನಾಟಕದ ವೀರ ವನಿತೆಯರು' ಎಂಬ ಪಾಠದಿಂದ ಆರಿಸಿಕೊಳ್ಳಲಾಗಿದೆ.<br>ಈ ಮಾತನ್ನು ಶಿವಾಜಿ ಮಹಾರಾಜರು ಬೆಳವಡಿ ಮಲ್ಲಮ್ಮಾಜಿಯಲ್ಲಿ ಕ್ಷಮೆ ಕೇಳುತ್ತಾ ನುಡಿದರು.<br>ಬೆಳವಡಿ ಮಲ್ಲಮ್ಮಾಜಿಯು 8–10 ಸರದಾರರೊಂದಿಗೆ ಜಗದಾಂಬೆಯ ದರ್ಶನ ಪಡೆದು ಮರಳುತ್ತಿದ್ದ ಶಿವಾಜಿಯ ಮೇಲೆ ಮಿಂಚಿನಂತೆ ಎರಗಿ ಖಡ್ಗದ ಹೊಡೆತದಿಂದ ಅವರನ್ನೆಲ್ಲ ನೆಲಕ್ಕೆ ಉರುಳಿಸಿದಳು. ಹಠಾತ್ತನೆ ದಾಳಿ ಮಾಡಿದ ರಾಣಿಯನ್ನು ಕಂಡ ಶಿವಾಜಿ ತಲ್ಲಣಗೊಂಡನು. ಶಿವಾಜಿಯು ಕುದುರೆಯಿಂದ ಕೆಳಗೆ ಇಳಿದು ಕೈಜೋಡಿಸಿ ''ದೇವಿ ನನ್ನ ಅಪರಾಧವನ್ನು ಕ್ಷಮಿಸು. ನಾನು ನಿನ್ನ ಮಗನೆಂದು ತಿಳಿ'' ಎಂದು ಕೇಳಿಕೊಂಡನು.<br>ಶಿವಾಜಿಯು ಮಲ್ಲಮ್ಮಾಜಿಯನ್ನು ತಾಯಿಯ ಸ್ಥಾನದಲ್ಲಿರಿಸಿ ಶರಣಾಗತನಾಗಿರುವುದು ಸ್ವಾರಸ್ಯಕರವಾದ ಸಂಗತಿಯಾಗಿದೆ. | |
| 26. | ''ಗೋಡೆಗೆ ಕಪ್ಪ ಬಳಿದ್ಹಂಗೆ.''<br>***ಉತ್ತರ :*** | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ಈ ಸಾಲನ್ನು ಜನಪದರು ಅಥವಾ ಅಜ್ಞಾತ ಕವಿಗಳು ರಚಿಸಿದ 'ಜನಪದ ಗೀತೆ' ಎಂಬ ಪದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ.<br>ಜನಪದರು ಆಕಾಶದಲ್ಲಿ ಮೋಡಗಳು ಕಾಣಿಸಿಕೊಂಡಾಗ ತಮ್ಮೊಳಗೆ ಆದ ಸಂತೋಷವನ್ನು ಸಂಭ್ರಮಿಸುವಾಗ ಈ ಸಾಲು ಬಂದಿದೆ.<br>ಗ್ರಾಮೀಣ ಪ್ರದೇಶದಲ್ಲಿ ಅಪ್ಪರಿಲ್ಲದೆ ಅಂದರೆ ಮಳೆಯಿಲ್ಲದೆ ಭೂಮಿ ಒಣಗಿದೆ ದನಕರುಗಳಿಗೆ ಕುಡಿಯಲು ನೀರು ಸಿಗುತ್ತಿಲ್ಲ. ಆದ್ದರಿಂದ ದನಕರುಗಳು ಸಪ್ಪೆ ದಂಟಿನಂತೆ ಆಗಿವೆ. ರೈತರು ಮಳೆಗಾಗಿ ಕಾಯುತ್ತಾ ಕುಳಿತಾಗ ಮೂಡಣದಲ್ಲಿ ಕಪ್ಪಾದ ಮೋಡಗಳು ಕಾಣಿಸಿಕೊಳ್ಳುತ್ತವೆ. ಅವುಗಳ ಚಂದವನ್ನು 'ಗೋಡೆಗೆ ಕಪ್ಪ ಬಳಿದ್ಹಂಗೆ' ಎಂದು ವರ್ಣಿಸಿ ಹಾಡಿದ್ದಾರೆ.<br>ಈ ಕವನದ ಸಾಲಿನಲ್ಲಿ ಗ್ರಾಮೀಣ ಸೊಗಡಿನ ಅಲಂಕಾರಿಕ ಭಾಷೆ ಬಂದಿರುವುದು ತುಂಬಾ ಸ್ವಾರಸ್ಯಕರವಾಗಿದೆ. | |
| **VI.** | **ಐದು-ಆರು ವಾಕ್ಯಗಳಲ್ಲಿ ಉತ್ತರಿಸುವುದು :** | **4 × 3 = 12** |
| | ವಿಷಯಕ್ಕೆ | 2 ಅಂಕಗಳು |
| | ಭಾಷಾಶೈಲಿಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 27. | ಕೊಡಗಿನ ಗೌರಮ್ಮನವರ ಸಾಹಿತ್ಯ ಸೃಷ್ಟಿಗೆ ಪೂರಕವಾದ ವಿಚಾರಗಳನ್ನು ಕುರಿತು ಬರೆಯಿರಿ.<br>***ಉತ್ತರ :***<br>ಕೊಡಗಿನ ಗೌರಮ್ಮನವರ ವಿವಾಹವು ಆಗರ್ಭ ಶ್ರೀಮಂತ ಜಿ.ಎಂ. ಮಂಜುನಾಥಯ್ಯ ಎಂಬುವರಲ್ಲಿ ಮ್ಯಾನೇಜರ್ ಆಗಿ ಕಾಫಿ ಎಸ್ಟೇಟ್ ನೋಡಿಕೊಳ್ಳುತ್ತಿದ್ದ ಬಿ.ಟಿ. ಗೋಪಾಲಕೃಷ್ಣಯ್ಯರೊಡನೆ ಆಯಿತು. ಶಿವರಾಮ ಕಾರಂತ, ಮಾಸ್ತಿ ವೆಂಕಟೇಶ ಅಯ್ಯಂಗಾರ್, ದ.ರಾ. ಬೇಂದ್ರೆ ಮುಂತಾದ ಹೆಸರಾಂತ ಲೇಖಕರು ಮುಂಜುನಾಥಯ್ಯನವರ ಮನೆಯಲ್ಲಿ ಆಗಾಗ್ಗೆ ಮೊಕ್ಕಾಂ ಹೂಡುತ್ತಿದ್ದರು. ಹೀಗಾಗಿ ಇವರೆಲ್ಲರ ಪರಿಚಯ ಗೌರಮ್ಮನವರಿಗಿತ್ತು. ಪ್ರಸಿದ್ಧ ಸಾಮಾಜಿಕ ಕಾರ್ಯಕರ್ತೆ ಮತ್ತು ಲೇಖಕಿಯಾಗಿದ್ದ ಆರ್. ಕಲ್ಯಾಣಮ್ಮನವರೊಡನೆ ಇವರು ಸಂಪರ್ಕ ಇಟ್ಟುಕೊಂಡಿದ್ದರು.<br>ಯಕ್ಷಗಾನ, ತಾಳಮದ್ದಳೆ, ಕುಮಾರವ್ಯಾಸ, ಉಮರ್ ಖಯಾಮ್‌ನ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ಕಾವ್ಯಗಳ ಬಗ್ಗೆ ಇವರು ಆಸಕ್ತಿಯನ್ನು ಬೆಳೆಸಿಕೊಂಡಿದ್ದರು. ಇವರು ಕೆಲವು ಜನಪದ ಗೀತೆಗಳನ್ನು ಸಂಗ್ರಹಿಸಿದರು.<br>ಹೀಗಾಗಿ ಸಾಹಿತ್ಯ ಮತ್ತು ಸಾಂಸ್ಕೃತಿಕ ವಲಯದ ಚರ್ಚೆ ಬದಲಾವಣೆಗಳು ಮತ್ತು ಹೊಸ ಬರೆವಣಿಗೆಯ ಸಂಪರ್ಕ ಕೊಡಗಿನ ಗೌರಮ್ಮನವರ ಸಾಹಿತ್ಯ ಸೃಷ್ಟಿಗೆ ಪೂರಕವಾದವು. | |
| 28. | ಕಿತ್ತೂರು ರಾಣಿ ಚೆನ್ನಮ್ಮನ ಸ್ವಾಭಿಮಾನ ಮತ್ತು ದೇಶಾಭಿಮಾನವನ್ನು ನೀವು ಹೇಗೆ ಪ್ರಶಂಸಿಸುತ್ತೀರಿ ? ವಿವರಿಸಿ.<br>***ಉತ್ತರ :***<br>ಬೆಳಗಾವಿ ಜಿಲ್ಲೆಯ ಕಿತ್ತೂರು ಚೆನ್ನಮ್ಮ ಬಲಾಢ್ಯ ಬ್ರಿಟಿಷರನ್ನು ಸೋಲಿಸಿದಳು. ಅವಳು ಸೆರೆಯಾಳುಗಳನ್ನು ಅದರಲ್ಲೂ ಮಹಿಳೆ ಮತ್ತು ಮಕ್ಕಳನ್ನು ಅಕ್ಕರೆಯಿಂದ ಕಂಡ ಕರುಣಾಮಯಿಯಾಗಿದ್ದಳು. ಮುಂದೆ ಬ್ರಿಟಿಷರು ಹಿತಶತ್ರುಗಳೊಂದಿಗೆ ಪಿತೂರಿ ನಡೆಸಿ ಮದ್ದಿನಲ್ಲಿ ಸೆಗಣಿ ಸೇರಿಸಿದರು. ಇದರಿಂದ ರಾಣಿ ಚೆನ್ನಮ್ಮಳ ತೋಪುಗಳು ಹಾರದಂತೆ ಮೋಸ ಮಾಡಿದರು. ಕೊನೆಗೆ ಬ್ರಿಟಿಷರು ಮೋಸದಿಂದಲೇ ರಾಣಿ ಚೆನ್ನಮ್ಮನನ್ನು ಸೆರೆಹಿಡಿದು ಜೈಲಿನಲ್ಲಿಟ್ಟರು. ಸೆರೆಯಲ್ಲಿದ್ದಾಗಲೂ ಸ್ವಾತಂತ್ರ್ಯದ ಕನಸನ್ನೇ ಕಂಡಳು ವೀರರಾಣಿ ಚೆನ್ನಮ್ಮ, ಸೆರೆಯಲ್ಲಿ ಸಂಧಿಸಲು ಬಂದ ಸಂಗೊಳ್ಳಿರಾಯಣ್ಣ 'ತಾಯಿ' ಎಂದು ಕರೆದಾಗ 'ತಾಯಿ ಎಂದು ಕರೆದ ಕನ್ನಡದ ಕಂದ ಯಾರು ?' ಎಂದು ಕೇಳಿದ ಕೆಚ್ಚಿನ ರಾಣಿ ಚೆನ್ನಮ್ಮ "ನಿಮ್ಮ ಧಮನಿ ಧಮನಿಗಳಲ್ಲಿ ರಕ್ತದ ಕಣಗಳಿರುವವರೆಗೂ ವೀರರಾಗಿ ಹೋರಾಡಿ" ಎಂದು ಹುರಿದುಂಬಿಸಿದಳು. ಜೈಲಿನಲ್ಲಿರುವಾಗಲೇ ಕಿತ್ತೂರು ಚೆನ್ನಮ್ಮ ವೀರ ಮರಣ ಹೊಂದಿದಳು. ಕಿತ್ತೂರು ಚೆನ್ನಮ್ಮ ಬ್ರಿಟಿಷರ ವಿರುದ್ಧ ಸ್ವಾತಂತ್ರ್ಯ ಹೋರಾಟದ ಕಹಳೆ ಊದಿದ್ದು ಝಾನ್ಸಿ ರಾಣಿ ಲಕ್ಷ್ಮೀಬಾಯಿಗಿಂತಲೂ 28 ವರ್ಷ ಮೊದಲು ಎಂಬ ಸಂಗತಿ ನಮ್ಮ ಮೈನವಿರೇಳಿಸುತ್ತದೆ. | |
| 29. | ಮನುಷ್ಯರ ನಡುವಿನ ವೈಮನಸ್ಸನ್ನು ತೊಡೆದು ಹಾಕುವ ಕನಸು 'ಕಟ್ಟತೇವ ನಾವು' ಕವಿತೆಯಲ್ಲಿ ಹೇಗೆ ವ್ಯಕ್ತವಾಗಿದೆ ಎಂಬುದನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.<br>***ಉತ್ತರ :***<br>ಜಾತಿ, ಮತ, ಧರ್ಮ ಶೋಷಣೆಗಳಿಂದ ಒಡೆದು ಹೋದ ಜನರ ಮನಸ್ಸುಗಳನ್ನು ಒಂದುಗೂಡಿಸುತ್ತೇವೆ. ಸಮುದಾಯದ ಹಿತ ಬಯಸುವ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ಕನಸುಗಳನ್ನು ಕಾಣಲು ಅವಕಾಶ ಮಾಡಿಕೊಡುತ್ತೇವೆ. ಜಾತಿ ಭೀತಿಗಳಿಲ್ಲದ ಬಾಳನ್ನು ಕಟ್ಟುವುದರ ಮೂಲಕ ಕುಲವೆನ್ನದ ಮನುಕುಲವ ಕಟ್ಟುತ್ತೇವೆ.<br>ದುಃಖ, ದಾರಿದ್ರ್ಯ, ಶೋಷಣೆಯಿಲ್ಲದಂತೆ ಸಾಮಾಜಿಕ ಪ್ರಜ್ಞೆ ಮೂಡಿಸಲು ಹಾಡು ಕಟ್ಟುತ್ತೇವೆ. ಅದರ ಮೂಲಕ ಸಮಾನತೆಯ ಸಮಾಜ ನಿರ್ಮಾಣ ಮಾಡುತ್ತೇವೆ. ಅದು ಮುಳ್ಳಿನ ದಾರಿಯಾದರೂ ಮುಳ್ಳು ತುಳಿದು ಕ್ರಾಂತಿಯನ್ನು ಮಾಡಿ ಜನರಲ್ಲಿ ಆತ್ಮವಿಶ್ವಾಸ ಭರವಸೆಯನ್ನು ಮೂಡಿಸುತ್ತೇವೆ. ಜಾತಿ ಪದ್ಧತಿ ತೊಲಗಿಸಲು ರಕ್ತಗಾಲಿನಿಂದ ಬಂಡಾಯವೆದ್ದು. ಈ ನೆಲದಲ್ಲಿ ಹೋರಾಟ ಮಾಡುತ್ತೇವೆ. ಈ ರೀತಿಯಾಗಿ ಕ್ರಾಂತಿ ಮತ್ತು ಬಂಡಾಯದ ಮೂಲಕ ಮನುಷ್ಯನ ನಡುವಿನ ವೈಮನಸ್ಸನ್ನು ತೊಡೆದು ಹಾಕುವ ಕನಸು ಕಟ್ಟತೇವ ನಾವು ಕವಿತೆಯಲ್ಲಿ ವ್ಯಕ್ತವಾಗಿದೆ. | |
| 30. | ಪುರಂದರದಾಸರ ಕೀರ್ತನೆಯಲ್ಲಿ ಡಂಭಾಚಾರದ ಭಕ್ತಿಯ ಸ್ಪಷ್ಟ ಚಿತ್ರಣವು ಹೇಗೆ ಚಿತ್ರಿತವಾಗಿದೆ ? ವಿವರಿಸಿ.<br>***ಉತ್ತರ :***<br>ಪುರಂದರದಾಸರ ಕೀರ್ತನೆಯಲ್ಲಿ ಡಂಭಾಚಾರದ ಭಕ್ತಿಯ ಸ್ಪಷ್ಟ ಚಿತ್ರಣವು ಸುಂದರವಾಗಿ ಚಿತ್ರಿತವಾಗಿದೆ. ಭಕ್ತನಿಗೆ ದೇವರ ಮೇಲೆ ಸ್ವಲ್ಪವೂ ಭಕ್ತಿಯಿಲ್ಲ. ಆದರೂ ಉದಯಕಾಲದಲೆದ್ದು ಗಡಗಡ ನಡುಗುತ್ತ ನದಿಯಲ್ಲಿ ಸ್ನಾನ ಮಾಡಿ ಡಾಂಭಿಕ ಭಕ್ತಿಯನ್ನು ತೋರಿಸುತ್ತಿದ್ದಾನೆ. ಅವನ ಮನಸ್ಸಿನಲ್ಲಿ ಕ್ರೋಧ, ಮದ, ಮತ್ಸರಗಳು ತುಂಬಿಕೊಂಡಿವೆ. ಕಂಚುಗಾರನ ಬಿಡಾರದ ಹಾಗೆ ಕಂಚು ಹಿತ್ತಾಳೆಯ ಪ್ರತಿಮೆಗಳನ್ನು ಜೋಡಿಸಿ ಅವು ಮಿಂಚಲು ಹಲವು ದೀಪಗಳನ್ನು ಹಚ್ಚಿ ವಂಚನೆಯಿಂದ ಪೂಜೆ ಮಾಡುತ್ತಾನೆ. ಕೈಯಲ್ಲಿ ಜಪಮಣಿ ಹಿಡಿದು, ಬಾಯಿಂದ ಮಂತ್ರಪಠಿಸುತ್ತಾನೆ. ಅರಿವೆಯ ಮುಸುಕನ್ನು ಮೊರೆಗೆ ಹಾಕಿಕೊಂಡು ಪರಸತಿಯರನ್ನು ಮನದಲ್ಲಿ ನೆನೆಯುತ್ತ ಪರಮ ವೈರಾಗ್ಯಶಾಲಿ ಎಂದೆನಿಸಿಕೊಳ್ಳುತ್ತಾನೆ. ನಾಟಕ ಸ್ತ್ರೀಯರಂತೆ ಬಯಲ ಡಂಭವ ತೋರುತ್ತಾನೆ ಎಂದು ಪುರಂದರದಾಸರು ಡಾಂಭಿಕ ಭಕ್ತಿಯನ್ನು ಚಿತ್ರಿಸಿದ್ದಾರೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| **VII.** | **ಕವಿಗಳ / ಸಾಹಿತಿಗಳ ಕಾಲ, ಜನ್ಮಸ್ಥಳ, ಕೃತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯುವುದು :** | **2 × 3 = 6** |
| | ಜನ್ಮಸ್ಥಳ, ಕಾಲಕ್ಕೆ | 1 ಅಂಕ |
| | ಕೃತಿಗೆ | 1 ಅಂಕ |
| | ಭಾಷಾಶೈಲಿಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 31. | *ಆರ್.ಎಸ್. ಸುಂಕದ :*<br>***ಉತ್ತರ :***<br>ಆರ್.ಎಸ್. ಸುಂಕದ ಇವರು ಧಾರವಾಡ ಜಿಲ್ಲೆಯ ನವಲಗುಂದ ತಾಲ್ಲೂಕಿನ ಮೊರಬದಲ್ಲಿ ೧೯೫೧ ರಲ್ಲಿ ಜನಿಸಿದರು.<br>‘ಕನ್ನಡ ವ್ಯಾಕರಣ’, ‘ಗಂಗಾಧರ ಮಡಿವಾಳೇಶ್ವರ ತುರಮರಿ ಒಂದು ಅಧ್ಯಯನ’, ‘ಮೊರಬ ಗ್ರಾಮದ ಸಾಂಸ್ಕೃತಿಕ ಅಧ್ಯಯನ’ ಇವು ಇವರ ಕೃತಿಗಳು. ‘ಶ್ರೀ ಶಿಶುನಾಳ ಶರೀಫ ಸಾಹೇಬರ ಅನುಭವ ಗೀತ ಮಂಜರಿ’ ಇವರ ಸಂಪಾದಿತ ಕೃತಿಯಾಗಿದೆ. | |
| 32. | *ಪುರಂದರದಾಸರು :*<br>***ಉತ್ತರ :***<br>ಪುರಂದರದಾಸರು ಪುರಂದರಗಡದಲ್ಲಿ ಜನಿಸಿದರು. ಇವರು ೧೬ ನೆಯ ಶತಮಾನದಲ್ಲಿ ಜೀವಿಸಿದ್ದರು.<br>ಪುರಂದರದಾಸರು ಕೀರ್ತನೆ, ಸುಳಾದಿ, ಉಗಾಭೋಗಗಳನ್ನು ರಚಿಸಿದ್ದಾರೆ. ಇವರನ್ನು ‘ಕರ್ನಾಟಕ ಸಂಗೀತ ಪಿತಾಮಹ’ ಎಂದು ಕರೆಯುತ್ತಾರೆ. ಇವರ ಅಂಕಿತ ಪುರಂದರ ವಿಠಲ. | |
| **VIII.** | **ಗಾದೆಯ ಮಾತನ್ನು ವಿಸ್ತರಿಸಿ ಬರೆಯುವುದು : (ಯಾವುದಾದರೂ ಒಂದಕ್ಕೆ ಮಾತ್ರ)** | **1 × 3 = 3** |
| 33. | “ಮಾಡಿದ್ದು ಉಣ್ಣೋ ಮಹಾರಾಯ.”<br>**ಅಥವಾ**<br>“ಹಾಸಿಗೆ ಇದ್ದಷ್ಟು ಕಾಲು ಚಾಚು.” | |
| | ಗಾದೆಯ ಮಹತ್ವ | 1 ಅಂಕ |
| | ಗಾದೆಯ ಅರ್ಥ / ವಿವರಣೆ | 1 ಅಂಕ |
| | ಭಾಷಾಶೈಲಿಗೆ / ಉದಾಹರಣೆಗೆ | 1 ಅಂಕ |
| | ಒಟ್ಟು | 3 ಅಂಕಗಳು |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| IX. | **ಎಂಟು-ಹತ್ತು ವಾಕ್ಯಗಳಲ್ಲಿ ಉತ್ತರಿಸುವುದು :** | **1 × 4 = 4** |
| | ವಿಷಯಕ್ಕೆ | 3 ಅಂಕಗಳು |
| | ಭಾಷಾಶೈಲಿಗೆ | 1 ಅಂಕ |
| | ಒಟ್ಟು | 4 ಅಂಕಗಳು |
| 34. | ಸೋಮಣ್ಣನು ಕುಲಕರ್ಣಿಯ ಕೃತ್ಯವನ್ನು ಹೇಗೆ ಖಂಡಿಸಿದನು ? ವಿವರಿಸಿ.<br>**ಅಥವಾ**<br>ರಾಮಸಿಂಗ್ ಕುಟುಂಬದವರ ದೇಶಪ್ರೇಮ ಮತ್ತು ತ್ಯಾಗವನ್ನು ಕುರಿತು ನಿಮ್ಮ ಮಾತುಗಳಲ್ಲಿ ಬರೆಯಿರಿ.<br>***ಉತ್ತರ :***<br>ಕುಲಕರ್ಣಿಯ ಗುಂಡೇಟಿಗೆ ರಾಮಸಿಂಗ್‌ನು ಬಲಿಯಾದಾಗ ಅಲ್ಲಿಗೆ ಬಂದ ಸೋಮಣ್ಣನು ಕುಲಕರ್ಣಿಯವರೊಂದಿಗೆ ಮಾತಿಗಿಳಿದನು. ರಾಮಸಿಂಗ್ ಉದ್ಧಟನಾಗಿರಲಿಲ್ಲ ಭಾರತಮಾತೆಯ ಬಂಧ ವಿಮೋಚನೆಗೆ ನಿಂತ ಅವನನ್ನು ಜೈಲಿಗೆ ಹಾಕಬಹುದಿತ್ತು. ಅದನ್ನು ಬಿಟ್ಟು ಗುಂಡಿಟ್ಟು ಅವನನ್ನು ಕೊಂದಿದ್ದು ನಿಮ್ಮ ಪರಾಕ್ರಮವೇನು ? ಎಂದು ಪ್ರಶ್ನಿಸಿದನು.<br>ದುಶ್ಚಟಗಳಿಂದ ದೂರವಾಗಿರಿ ಎಂದು ಆಜ್ಞೆ ಕೊಡಿರಿ. ಅದನ್ನು ಪಾಲಿಸುತ್ತೇವೆ. ನಮ್ಮ ಜನರಿಗೆ ಸ್ವಚ್ಛತೆ ಮತ್ತು ಶಿಕ್ಷಣದ ಪಾಠ ಕಲಿಸಿರಿ. ಅವರು ಆಳಾಗಿ ನಿಮ್ಮ ಸೇವೆ ಮಾಡುತ್ತಾ ನಿಮ್ಮನ್ನು ದೇವರಂತೆ ಪೂಜೆ ಮಾಡುತ್ತಾರೆ. ಸ್ವಾತಂತ್ರ್ಯಕ್ಕಾಗಿ ಹಂಬಲಿಸುವ ನಮಗೆ ಪಾರತಂತ್ರ್ಯದ ಕೆಸರಿನಲ್ಲಿ ಕೊಳೆಯಿರಿ ಎಂದರೆ ಅದು ಮಾನವನ ದರ್ಪದ ಮಾತಾಗುತ್ತದೆ.<br>ದೇಶದ ಸ್ವಾತಂತ್ರ್ಯ ಹೋರಾಟವು ಲಾಭ ಹಾನಿಗಳ ವ್ಯಾಪಾರವಲ್ಲ. ಪ್ರತಿಫಲಕ್ಕೆ ಆಶಿಸುವ ನಿಮ್ಮ ಸ್ವಾರ್ಥ ಬುದ್ಧಿಯೇ ನಿಮ್ಮನ್ನು ಗುಲಾಮರನ್ನಾಗಿ ಮಾಡಿದೆ. ನಾವು ತಿನ್ನುವ ಮಾವಿನ ಹಣ್ಣಿನ ಮರಗಳನ್ನು ನಾವೇ ಹಚ್ಚಿಲ್ಲ. ನಮ್ಮ ಪೂರ್ವಜರು ಮುಂದಿನ ಪೀಳಿಗೆಗಾಗಿ ಹಚ್ಚಿದ್ದಾರೆ. ನಾವು ಸ್ವಾತಂತ್ರ್ಯಕ್ಕಾಗಿ ಹೋರಾಡಿ ಸತ್ತರೆ ಮುಂದಿನ ಪೀಳಿಗೆಯವರು ಅದರ ಫಲ ಸವಿಯುತ್ತಾರೆ. ಕುಲಕರ್ಣಿಯವರೇ, ನೀವು ಫೌಜುದಾರರಾದಾಕ್ಷಣ ನಿಮಗೆ ಸುಖ ಸಿಗುವುದಿಲ್ಲ ಗೇಣು ಹೊಟ್ಟೆಗಾಗಿ ದೇಶದ ಕಂದಮ್ಮರನ್ನು ಕೊಂದು ರಕ್ತದ ಮಡುವಿನಲ್ಲಿ ಮೆರೆಯುವುದು. ನಿಮ್ಮ ಕರ್ತವ್ಯ ನಿಷ್ಠೆಯೇ ? ಧಿಕ್ಕಾರವಿರಲಿ ನಿಮ್ಮ ಬದುಕಿಗೆ ಎಂದು ಸೋಮಣ್ಣನು ಕುಲಕರ್ಣಿಯ ಕೃತ್ಯವನ್ನು ಕಟುವಾಗಿ ಖಂಡಿಸಿದನು.<br>**ಅಥವಾ**<br>ಮೋಹನಪುರದಲ್ಲಿ ವೀರಮಾತೆ ತುಳಜಬಾಯಿ ಮತ್ತು ಉತ್ಸಾಹೀ ತರುಣ ರಾಮಸಿಂಗ್ ವಾಸಿಸುತ್ತಿದ್ದರು. ಈ ಊರಿನಲ್ಲಿಯೂ ಚಲೇಜಾವ್ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ಚಳುವಳಿಯ ಕಾವು ಉಕ್ಕೇರಿದೆ.<br>ಒಂದು ವರ್ಷದ ಹಿಂದೆ ತುಳಜಾಬಾಯಿಯು ತನ್ನ ಪತಿಯನ್ನು ಸ್ವಾತಂತ್ರ್ಯ ಹೋರಾಟದಲ್ಲಿ ಕಳೆದುಕೊಂಡಿದ್ದಾಳೆ. ಈಗ ನಡೆಯುತ್ತಿರುವ ಚಳುವಳಿ ಹತ್ತಿಕ್ಕಲು ಕುಲಕರ್ಣಿ ಮತ್ತು ಇಬ್ಬರು ಸಿಪಾಯಿಗಳು ಮೋಹನಪುರಕ್ಕೆ ಬಂದಿದ್ದಾರೆ. ತುಳಜಾಬಾಯಿಯು ತನ್ನ ಮಗ ರಾಮಸಿಂಗ್‌ನು ಸ್ವಾತಂತ್ರ್ಯ ಹೋರಾಟದಲ್ಲಿ ಬಲಿಯಾಗುವ ಅರಿವಿದ್ದರೂ ಧೈರ್ಯದಿಂದ ತನ್ನ ಮಗನಿಗೆ ಆಶೀರ್ವದಿಸಿ ಶುಭಕೋರಿ ಹೋರಾಟಕ್ಕೆ ಕಳುಹಿಸಿಕೊಟ್ಟಿದ್ದಾಳೆ.<br>ಇನ್‌ಸ್ಪೆಕ್ಟರ್ ಕುಲಕರ್ಣಿ ಮತ್ತು ಸಿಪಾಯಿಗಳ ಮಾತಿಗೆ ಜಗ್ಗದೆ ರಾಮಸಿಂಗ್‌ನು 'ಭಾರತ ಮಾತಾಕಿ ಜಯ್' ಘೋಷಣೆ ಕೂಗುತ್ತಾ ಮುನ್ನಡೆದಾಗ ಕುಲಕರ್ಣಿಯ ಗುಂಡೇಟಿಗೆ ಬಲಿಯಾಗಬೇಕಾಯಿತು.<br>ರಕ್ತದ ಮಡುವಿನಲ್ಲಿದ್ದ ರಾಮಸಿಂಗ್‌ನನ್ನು ನೋಡಿ ಗೋಳಿಡುತ್ತಾ ತುಳಜಾಬಾಯಿಯು "ನಿನ್ನ ಕೈಯ ನಿಶಾನೆ ಕಸಿದುಕೊಂಡರೋ ? ಇನ್ನೊಂದು ಧ್ವಜ ತಂದಿರುವೆ" ಎಂದು ಮಗನ ದೇಹದ ಮೇಲೆ ಬಿದ್ದು ಪ್ರಲಾಪಿಸುವಳು.<br>ಕುಲಕರ್ಣಿಯು "ಹೆಣ್ಣುಮಗಳೇ, ಆ ಧ್ವಜವನ್ನು ಕೆಳಗಿಡು ಮೊದಲು" ಎಂದಾಗ ಪತಿಯನ್ನು ಮಗನನ್ನು ಸ್ವಾತಂತ್ರ್ಯಕ್ಕಾಗಿ ಬಲಿಕೊಟ್ಟಿರುವೆ. ಪ್ರಾಣ ತ್ಯಜಿಸಲು ಸಿದ್ಧಳಿದ್ದೇನೆ. ಆದರೆ ಈ ಧ್ವಜವನ್ನು ಕೆಳಗಿಡಲಾರೆ ಎಂದು ತುಳಜಾಬಾಯಿ ಹೇಳುತ್ತಾಳೆ. ಇದು ರಾಮಸಿಂಗ್ ಮತ್ತು ಕುಟುಂಬದವರ ದೇಶಪ್ರೇಮ ಮತ್ತು ತ್ಯಾಗವಾಗಿದೆ. | |
| **X.** | **ಪದ್ಯಭಾಗ ಪೂರ್ಣ ಮಾಡುವುದು : (ತಪ್ಪಿಲ್ಲದೆ ಬರೆದ ಪ್ರತಿ ಪೂರ್ಣಸಾಲಿಗೆ 1 ಅಂಕ)** | **1 × 4 = 4** |
| 35. | ನಾವು .............................................................<br>.....................................................................<br>.....................................................................<br>........................................................... ಇಂದೆ<br>**ಅಥವಾ**<br>ಕರ್ನಾಟಕ .........................................................<br>.....................................................................<br>.....................................................................<br>.......................................................... ಒಂದೆ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ***ಉತ್ತರ :***<br>ನಾವು ನೀವು ಅವರು ಇವರು<br>ಒಂದೆ ಒಂದೆ ಒಂದೆ<br>ಭೂಮಿ ತಾಯ ಕುಡಿಗಳೆಂದು<br>ಪಣವ ತೊಡಿರಿ ಇಂದೆ<br>**ಅಥವಾ**<br>ಕರ್ನಾಟಕ ವಂಗ ಆಂಧ್ರ<br>ಭಾರತೀಯರೊಂದೆ.<br>ಪೂರ್ವೋತ್ತರ ಪಡು ತೆಂಕಣ<br>ಗಾಳಿ ಮುಗಿಲು ಒಂದೆ. | |
| **XI.** | **ಗದ್ಯಭಾಗವನ್ನು ಓದಿಕೊಂಡು, ಪ್ರಶ್ನೆಗಳಿಗೆ ಉತ್ತರಿಸುವುದು :**<br>**(ವಾಕ್ಯರೂಪದಲ್ಲಿ ಬರೆದ ಪ್ರತಿ ಸರಿ ಉತ್ತರಕ್ಕೆ ಒಂದು ಅಂಕ)** | **1 × 4 = 4** |
| 36. | ಅನೇಕ ಯುದ್ಧವೀರರು ಮತ್ತು ದಾನವೀರರು ನಮ್ಮ ನಾಡಿನಲ್ಲಿ ಆಗಿ ಹೋಗಿದ್ದಾರೆ. ಇವರು ನಿರ್ವಹಿಸಿದ ಮಹಾಯುದ್ಧ, ಮಹಾದಾನಗಳನ್ನು ಇಲ್ಲಿನ ಅನೇಕ ಕಾವ್ಯಗಳು, ಶಾಸನಗಳು ಕೈಯೆತ್ತಿ ಸಾರುತ್ತಿವೆ ಇವರಲ್ಲಿ ಅತ್ತಿಮಬ್ಬೆ ಸುಪ್ರಸಿದ್ಧ ಮಹಿಳೆ.<br><br>ಅತ್ತಿಮಬ್ಬೆ ಬಾಳಿದುದು ಹತ್ತನೆಯ ಶತಮಾನದ ಉತ್ತರಾರ್ಧದಲ್ಲಿ. ಆಗ ಕರ್ನಾಟಕವನ್ನು ಕಲ್ಯಾಣ ಚಾಲುಕ್ಯ ಚಕ್ರವರ್ತಿ ಇಮ್ಮಡಿ ತೈಲಪನು ಆಳುತ್ತಿದ್ದನು. ಇವನ ದಂಡನಾಯಕ ಮಲ್ಲಪ್ಪಯ್ಯನ ಮಗಳಾಗಿ ಅತ್ತಿಮಬ್ಬೆ ಜನಿಸಿದಳು. ಈತನ ಇನ್ನಿಬ್ಬರು ಹೆಣ್ಣುಮಕ್ಕಳೆಂದರೆ ಗುಂಡಮಬ್ಬೆ ಮತ್ತು ನಾಗಿಯಬ್ಬೆ.<br><br>ದೊರೆ ತೈಲಪನಲ್ಲಿ ಮಹಾಮಂತ್ರಿಯಾಗಿ ಧಲಪಯ್ಯನು ಕಾರ್ಯನಿರ್ವಹಿಸುತ್ತಿದ್ದನು. ಈತನ ಮಗ ನಾಗದೇವನು ಅತ್ತಿಮಬ್ಬೆ ಮತ್ತು ಗುಂಡಮಬ್ಬೆ ಇಬ್ಬರನ್ನು ಮದುವೆಯಾದನು. ಕಾಲಕಳೆದಂತೆ ದಂಪತಿಗಳು ಸುಖವಾಗಿ ಬಾಳತೊಡಗಿದರು. ನಾಗದೇವನು ಯುದ್ಧದಲ್ಲಿ ಹೋರಾಡಿ ವೀರಮರಣ ಹೊಂದಿದಾಗ ತಂಗಿ ಗುಂಡಮಬ್ಬೆ ಗಂಡನ ಶವವನ್ನು ಅಪ್ಪಿಕೊಂಡು ಸತಿ ಹೋದಳು. ಎಳೆಯ ಬಾಲಕನಾಗಿದ್ದ ಅಣ್ಣಿಗದೇವನ ಪಾಲನೆಗಾಗಿ ಅತ್ತಿಮಬ್ಬೆ ನಿಲ್ಲಬೇಕಾಯಿತು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ಅತ್ತಿಮಬ್ಬೆ ಸುಮಾರು 1500 ಜಿನ ದೇವಾಲಯಗಳನ್ನು ನಿರ್ಮಿಸಿದಳು. ಅಲ್ಲದೆ ಅವಳು ಸಾಹಿತ್ಯ ಪ್ರಿಯಳೂ ಆಗಿದ್ದಳು. ಇವಳು ಕವಿ ಚಕ್ರವರ್ತಿ ರನ್ನನಿಗೆ ಆಶ್ರಯ ನೀಡಿ 'ಅಜಿತನಾಥ ಪುರಾಣ'ವನ್ನು ಬರೆಯಿಸಿದಳು. ಈ ಪುರಾಣದಲ್ಲಿ ರನ್ನನು ಅತ್ತಿಮಬ್ಬೆಯನ್ನು ಜಿನಧರ್ಮಪತಾಕೆ, ದಾನಚಿಂತಾಮಣಿ ಎಂದು ಕೊಂಡಾಡಿದ್ದಾನೆ. ಇವಳು ಪೊನ್ನನಿಂದ 'ಶಾಂತಿಪುರಾಣ' ಎಂಬ ಕೃತಿಯನ್ನು ಬರೆಯಿಸಿ, ಅದರ ಒಂದು ಸಾವಿರ ಪ್ರತಿ ಮಾಡಿಸಿ ಬಸದಿಗಳಿಗೆ ಗುಡಿಗಳಿಗೆ ದಾನ ಮಾಡಿದಳು.<br><br>ಹೀಗೆ ಅತ್ತಿಮಬ್ಬೆ ದಾನ, ಧರ್ಮ ಸಾಹಿತ್ಯ ಮೊದಲಾದ ಮಹಾಕಾರ್ಯಗಳನ್ನು ಮಾಡಿ ಕನ್ನಡನಾಡಲ್ಲಿ ಪ್ರಸಿದ್ಧಿ ಪಡೆದಿದ್ದಾಳೆ.<br><br>ಎ) ಮಲ್ಲಪ್ಪಯ್ಯನ ಹೆಣ್ಣುಮಕ್ಕಳ ಹೆಸರುಗಳೇನು ?<br>**ಉತ್ತರ :** ಮಲ್ಲಪ್ಪಯ್ಯನಿಗೆ ಅತ್ತಿಮಬ್ಬೆ, ಗುಂಡಮಬ್ಬೆ, ನಾಗಿಮಬ್ಬೆ ಎಂಬ ಮೂವರು ಹೆಣ್ಣು ಮಕ್ಕಳಿದ್ದರು.<br><br>ಬಿ) ಗುಂಡಮಬ್ಬೆ ಸತಿಹೋಗಲು ಕಾರಣವೇನು ?<br>**ಉತ್ತರ :** ಪತಿ ನಾಗದೇವನು ಯುದ್ಧದಲ್ಲಿ ಹೋರಾಡುವಾಗ ವೀರ ಮರಣ ಹೊಂದಿದ್ದರಿಂದ ಅವನ ಶವವನ್ನು ಅಪ್ಪಿಕೊಂಡು ಗುಂಡಮಬ್ಬೆ ಸತಿ ಹೋದಳು.<br><br>ಸಿ) ಕವಿಚಕ್ರವರ್ತಿ ರನ್ನ ಅತ್ತಿಮಬ್ಬೆಯನ್ನು ಏನೆಂದು ಕೊಂಡಾಡಿದ್ದಾನೆ ?<br>**ಉತ್ತರ :** ಕವಿ ಚಕ್ರವರ್ತಿ ರನ್ನ ಅತ್ತಿಮಬ್ಬೆಯನ್ನು ಜಿನಧರ್ಮ ಪತಾಕೆ, ದಾನಚಿಂತಾಮಣಿ ಎಂದು ಕೊಂಡಾಡಿದ್ದಾನೆ.<br><br>ಡಿ) ಅತ್ತಿಮಬ್ಬೆ ಕನ್ನಡನಾಡಲ್ಲಿ ಪ್ರಸಿದ್ಧಿ ಪಡೆಯಲು ಕಾರಣವೇನು ?<br>**ಉತ್ತರ :** ಅತ್ತಿಮಬ್ಬೆಯು ದಾನ ಧರ್ಮ, ಸಾಹಿತ್ಯ ಮೊದಲಾದ ಮಹಾಕಾರ್ಯಗಳನ್ನು ಮಾಡಿದ್ದರಿಂದ ಕನ್ನಡನಾಡಲ್ಲಿ ಪ್ರಸಿದ್ಧಿ ಪಡೆದಿದ್ದಾಳೆ. | |
| **XII.** | **ಪ್ರಬಂಧ ಬರವಣಿಗೆ :** | **1 × 4 = 4** |
| 37. | ಗಣಕಯಂತ್ರ<br>**ಅಥವಾ**<br>ಗ್ರಂಥಾಲಯದ ಪ್ರಯೋಜನಗಳು | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ಪೀಠಿಕೆ | 1 ಅಂಕ |
| | ವಿಷಯ ಜೋಡಣೆ | 1 ಅಂಕಗಳು |
| | ಉಪಸಂಹಾರ | 1 ಅಂಕ |
| | ಭಾಷಾಶೈಲಿಗೆ | 1 ಅಂಕ |
| | ಒಟ್ಟು | 4 ಅಂಕಗಳು |
| **XIII.** | **ಪತ್ರ ಲೇಖನ ಬರೆಯುವುದು :** | **1 × 5 = 5** |
| 38. | ನಿಮ್ಮನ್ನು ಬೆಳಗಾವಿಯ ನಿವಾಸಿ 'ಆಕಾಶ' ಎಂದು ಭಾವಿಸಿಕೊಂಡು, ನಿಮ್ಮ ಬಡಾವಣೆಯಲ್ಲಿ ಆಚರಿಸಿದ ರಾಜ್ಯೋತ್ಸವದ ಕುರಿತು ಮೈಸೂರಿನಲ್ಲಿರುವ ನಿಮ್ಮ ಅಣ್ಣನಿಗೆ ಒಂದು ಪತ್ರವನ್ನು ಬರೆಯಿರಿ.<br>**ಅಥವಾ**<br>ನಿಮ್ಮನ್ನು ಧಾರವಾಡದ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿ 'ಅಜಯ್' ಎಂದು ಭಾವಿಸಿಕೊಂಡು, ಮುಂದಿನ ಶಿಕ್ಷಣಕ್ಕಾಗಿ ವರ್ಗಾವಣೆಪತ್ರ ನೀಡುವಂತೆ ಕೋರಿ, ಮುಖ್ಯೋಪಾಧ್ಯಾಯರಿಗೆ ಒಂದು ಮನವಿ ಪತ್ರವನ್ನು ಬರೆಯಿರಿ. | |
| | ವೈಯಕ್ತಿಕ ಪತ್ರ : | |
| | ಇಂದ, ವಿಳಾಸ, ಸಂಬೋಧನೆ, ದಿನಾಂಕ | 1 ಅಂಕ |
| | ಪತ್ರದ ಒಡಲು | 2 ಅಂಕಗಳು |
| | ಗೆ ವಿಳಾಸ, ಸಹಿಯೊಂದಿಗೆ ಮುಕ್ತಾಯ | 1 ಅಂಕ |
| | ವಿನ್ಯಾಸ, ಭಾಷಾಶೈಲಿಗೆ | 1 ಅಂಕ |
| | ಒಟ್ಟು | 5 ಅಂಕಗಳು |
| | **ಅಥವಾ** | |
| | ವ್ಯಾವಹಾರಿಕ ಪತ್ರ : | |
| | ಇಂದ, ಗೆ, ವಿಳಾಸ, ಸಂಬೋಧನೆ, ವಿಷಯ | 1 ಅಂಕ |
| | ಪತ್ರದ ಒಡಲು | 2 ಅಂಕಗಳು |
| | ಸ್ಥಳ, ದಿನಾಂಕ, ಸಹಿಯೊಂದಿಗೆ ಮುಕ್ತಾಯ | 1 ಅಂಕ |
| | ವಿನ್ಯಾಸ, ಭಾಷಾಶೈಲಿಗೆ | 1 ಅಂಕ |
| | ಒಟ್ಟು | 5 ಅಂಕಗಳು |